# ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

ಸಾಕ್ಷಿಯನ್ನು ದಿಃ **09.10.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

| | | |
|---|---|---|
| ಹೆಸರು | ಮಹದೇವ ಟಿ | ಡಿ.ಡಬ್ಲ್ಯೂಃ 1 |
| ತಂದೆಯ ಹೆಸರು | ತಮಯ್ಯ | |
| ವಯಸ್ಸು | 48 ವರ್ಷ | |
| ಕೆಲಸ | ಸರ್ಕಾರಿ ಶಾಲಾ ಶಿಕ್ಷಕ | |
| ವಾಸಃ | ಹೆಬ್ಬಾಳ, ಹನಗೋಡು ಹೋಬಳಿ | |

ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಎಂ ಇ ಪಿ ವಕೀಲ**ರಿಂದ**

ನನಗೆ ಫಿರ್ಯಾದುದಾರರ ಪರಿಚಯ ಇಲ್ಲ. ನನ್ನ ಮತ್ತು ಫಿರ್ಯಾದುದಾರರ ಮಧ್ಯೆ ಯಾವುದೇ ರೀತಿಯ ಹಣಕಾಸಿನ ವ್ಯವಹಾರ ನಡೆದಿಲ್ಲ. ನಿಪಿ 1 ರ ಚೆಕ್ ನ್ನು ನಾನು ಓಲೆ ರವಿ ಎಂಬುವವರಿಗೆ ಕೊಟ್ಟಿದ್ದೆ. 2019 ಜುಲೈ ಕೊನೆಯ ವಾರದಲ್ಲಿ ನಾನು ಫಿರ್ಯಾದುದಾರರಿಂದ ಯಾವುದೇ ರೂ 4 ಲಕ್ಷ ಸಾಲ ಪಡೆದಿಲ್ಲ. ನಿಪಿ 1 ರ ಚೆಕ್ ನ್ನು ನಾನು ಫಿರ್ಯಾದುದಾರರಿಗೆ ನೀಡಿಲ್ಲ. ಈ ಪ್ರಕರಣದ ನೋಟೀಸು ನನಗೆ ಜಾರಿ ಆಗಿಲ್ಲ. ಆದ್ದರಿಂದ ನಾನು ಉತ್ತರದ ನೋಟೀಸ್ ನ್ನು ಕೊಟ್ಟಿಲ್ಲ. ಆ ಸಮಯದಲ್ಲಿ ನಾನು ಬೇರೆ ಶಾಲೆಯಲ್ಲಿ ನಿಯೋಜನೆಯ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿದ್ದೆ. ಫಿರ್ಯಾದುದಾರರು ಯಾವುದೇ ಪತ್ರಿಕೆಯ ವರದಿಗಾರರಾಗಿಲೀ, ಏಜೆಂಟರಾಗಲೀ ವ್ಯವಸಾಯಗಾರರಾಗಲೀ ಆಗಿರುವುದಿಲ್ಲ. ರೂ 4 ಲಕ್ಷ ಸಾಲವನ್ನು ನೀಡುವ ಆರ್ಥಿಕ ಸಾಮರ್ಥ್ಯ ಫಿರ್ಯಾದುದಾರರಿಗೆ ಇಲ್ಲ. 2012 ರಲ್ಲಿ ಹೆಗ್ಗಂದೂರು ಶಿವಕುಮಾರ್ ಮುಖಾಂತರ ಪರಿಚಯದಲ್ಲಿ ಓಲೆ ರವಿರವರ ಹತ್ತಿರ ಎರಡು ಚೆಕ್ ಗಳನ್ನು ಭದ್ರತೆಗಾಗಿ ನೀಡಿ ರೂ 1 ಲಕ್ಷವನ್ನು ಸಾಲವಾಗಿ ಪಡೆದಿದ್ದೆ. 2013 ರಲ್ಲಿ ಹೆಗ್ಗಂದೂರು ಶಿವಕುಮಾರ್ ಮುಖಾಂತರ ಓಲೆ ರವಿರವರಿಗೆ ರೂ 1 ಲಕ್ಷ ಅಸಲು ಮತ್ತು ರೂ 22 ಸಾವಿರ ಬಡ್ಡಿಯನ್ನು ಕೊಟ್ಟೆ. ಬಾಕಿ ರೂ 8,500/- ಬಡ್ಡಿಯ ಬಾಬ್ತು ಕೊಡಬೇಕಾಗಿತ್ತು. ಆ

ಸಮಯದಲ್ಲಿ ನಾನು ಚೆಕ್ಕುಗಳನ್ನು ವಾಪಸ್ಸು ಕೊಡುವಂತೆ ಓಲೆ ರವಿರವರ ಬಳಿ ಕೇಳಿದೆ. ರೂ 8,500/- ಬಾಕಿ ಬಡ್ಡಿಯನ್ನು ಕೊಟ್ಟು ಚೆಕ್ಕುಗಳನ್ನು ತೆಗೆದುಕೊಂಡು ಹೋಗಿ ಎಂದು ಹೇಳಿದರು. ಆ ಮಧ್ಯದಲ್ಲಿ ನನಗೆ ಅಪಘಾತವಾಗಿ ಅನಾರೋಗ್ಯಕ್ಕೆ ತುತ್ತಾದೆ. ರೂ 8,500/- ಬಡ್ಡಿಯ ಬಾಬ್ತು ಕೊಡಲು ವಿಳಂಬವಾಗಿದ್ದರಿಂದ ಫಿರ್ಯಾದುದಾರರು ಒಂದು ಚೆಕ್ ನ್ನು ಮತ್ತು ಇನ್ನೊಂದು ಚೆಕ್ ನ್ನು ಹೆಗ್ಗಂದೂರು ಶಿವಕುಮಾರ್ ರವರ ಹೆಸರಿನಲ್ಲಿ ಓಲೆ ರವಿರವರು ಹಾಜರುಪಡಿಸಿ ಎರಡು ಪ್ರಕರಣಗಳನ್ನು ದಾಖಲಿಸಿದರು. ಹೆಗ್ಗಂದೂರು ಶಿವಕುಮಾರ್ ರವರು ದಾಖಲಿಸಿದ ಪ್ರಕರಣ ವಜಾಗೊಂಡಿತು. ಸ್ವಲ್ಪ ದಿನದ ನಂತರ ಎನ್ ಕೆ ಮಹದೇವ ಮತ್ತು ಎಸ್ ಗೋವಿಂದೇಗೌಡರವರ ಮಧ್ಯಸ್ಥಿಕೆಯಲ್ಲಿ ಹುಣಸೂರು ಪಟ್ಟಣ ಠಾಣೆಯಲ್ಲಿ ಓಲೆ ರವಿ ಮತ್ತು ನನಗೆ ರಾಜೀ ಸಂಧಾನವಾಯಿತು. ರೂ 8,500/- ಬಾಕಿ ಬಡ್ಡಿಯನ್ನು ಕೊಟ್ಟರೆ ಈ ಪ್ರಕರಣವನ್ನು ವಾಪಸ್ಸು ತೆಗೆಸುತ್ತೇನೆಂದು ಓಲೆ ರವಿರವರು ಹೇಳಿದರು.

ಮರು ದಿನ ನಾನು ಹಣವನ್ನು ತೆಗೆದುಕೊಂಡು ಓಲೆ ರವಿರವರ ಮನೆಗೆ ಹೋದಾಗ ಅವರು ಸದರಿ ಹಣಕ್ಕೆ ಬಡ್ಡಿ, ಚಕ್ರ ಬಡ್ಡಿ ಸೇರಿಸಿ ರೂ 52 ಸಾವಿರ ಕೊಡುವಂತೆ ಬೇಡಿಕೆ ಇಟ್ಟರು. ಅಷ್ಟು ಹಣ ಕೊಡದೇ ಇದ್ದರೆ ಹೇಗೆ ಬುದ್ಧಿ ಕಲಿಸಬೇಕೊ ಹಾಗೆ ಮಾಡುತ್ತೇನೆ ಎಂದು ಹೇಳಿ ವಾಪಸ್ಸು ಕಳುಹಿಸಿದರು. ಫಿರ್ಯಾದುದಾರರು ಮತ್ತು ನನ್ನ ನಡುವೆ ಯಾವುದೇ ರೀತಿಯಲ್ಲಿ ಹಣಕಾಸಿನ ಮತ್ತು ಚೆಕ್ಕಿನ ವ್ಯವಹಾರ ನಡೆದಿಲ್ಲ. ಆದ್ದರಿಂದ ಫಿರ್ಯಾದುದಾರರು ಸಲ್ಲಿಸಿದ ಫಿರ್ಯಾದನ್ನು ವಜಾಗೊಳಿಸಿ ನನ್ನನ್ನು ಬಿಡುಗಡೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ನೀಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.